ಸುತ್ತು ಬಳಸಿ ಪ್ರಶ್ನಿಸಿದಾಗ ಅದೊಂದು ತಪ್ಪು ಎಂಬಂತೆ ಉತ್ತರಿಸಿದ್ದರು. ತಮ್ಮ ಮಕ್ಕಳಿಗೆ ಮದುವೆ ಮಾಡಿಸಲು ತಾವೆಷ್ಟು ಕಷ್ಟ ಪಡಬೇಕೋ ಎಂದು ಹಳಹಳಿಸಿದ್ದರು. ಹಳ್ಳಿಯಲ್ಲಿನ ಜಾತಿ ಸಂಘಟನೆಗಳು ತಮ್ಮ ಕುಟುಂಬಕ್ಕೆ ಎಲ್ಲಿ ಬಹಿಷ್ಕಾರ ಹಾಕುತ್ತವೆಯೋ ಎಂಬ ಭೀತಿಯನ್ನು ವ್ಯಕ್ತಪಡಿಸಿದ್ದರು. ಪತ್ರಕರ್ತನಿಗೆ ತುಂಬಾ ನಿರಾಶೆಯಾಗಿತ್ತು. ತಾನು ಬರೆಯಲಿರುವ ಲೇಖನ ಏಕಮುಖವಾಗಿರುತ್ತದೇನೋ ಎಂದವನು ಅಳುಕಿದ್ದ. ಆದರೆ ಈ ಅಜ್ಜಿ ತನ್ನ ಮಗ ಜಾತಿ ಬಿಟ್ಟು ಮದುವೆಯಾದುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದೆ. ಎದುರಿನ ಮೂರು ಹಲ್ಲು ಹೋದುದನ್ನು ಗಣನೆಗೇ ತೆಗೆದುಕೊಳ್ಳದೆ ನಗುತ್ತಿದೆ.

'ಹಾಗಾದರೆ ಈ ಮದುವೆಗೆ ನಿಮ್ಮ ಮತ್ತು ಹೆಣ್ಣಿನ ಕಡೆಯವರ ಒಪ್ಪಿಗೆಯಿತ್ತಾ?'

'ಆರಂಭದಲ್ಲಿ ಹೆಣ್ಣಿನ ಕಡೆಯವರ ತಕರಾರು ಇತ್ತು. ನನ್ನ ಹಿರಿಯ ಮಗ ಗಾರೆ ಕೆಲಸದವ. ಅವನು ಮೆಚ್ಚಿದ ಹುಡುಗಿ ಟೀಚರ್. ಅವಳಿಗೂ ಅವನು ಇಷ್ಟವಾಗಿದ್ದ. ಮದುವೆ ಸರಳವಾಗಿ ನಡೆಯಿತು. ನನ್ನ ಮಗ ಗಾರೆ ಕೆಲಸದವನಾಗಿ ದಿನಕ್ಕೆ ಎರಡು ಸಾವಿರ ದುಡಿಯುತ್ತಿದ್ದಾನೆ. ಸೊಸೆಯ ಸಂಬಳ ಅವನ ಗಳಿಕೆಯದಕ್ಕಿಂತ ಕಡಿಮೆ'.

'ಆಮೇಲೆ ಏನಾಯಿತು?'

'ಆಗೋದೇನು? ಮೂರು ಮಕ್ಕಳಾದವು'.

ಅವನು ವಿಸ್ಮಯದಿಂದ ಉದ್ಗರಿಸಿದ.

'ಮೂವರು ಮಕ್ಕಳಾ!'

ಅಜ್ಜಿ ನಗುತ್ತಾ ಹೇಳಿತು. 'ಆಪರೇಷನ್ ಆಗದಿರುತ್ತಿದ್ದರೆ ಇನ್ನೂ ಆಗುತ್ತಿತ್ತು. ಅವನಿಗೆ ಎಂದೇನು? ನನಗೂ ಮೂವರು ಮಕ್ಕಳು!'

ಅವನು ವಿಸ್ಮಯದಿಂದ ಬಾಯಿಯನ್ನು ಕೈಯಿಂದ ಮುಚ್ಚಿದ. 'ನಿಮ್ಮ ಮೂವರು ಮಕ್ಕಳು ಏನ್ಮಾಡ್ತಿದ್ದಾರೆ?'

'ಹಿರಿಯವನ ಬಗ್ಗೆ ಹೇಳಿದೆನಲ್ಲಾ? ಗಾರೆ ಕೆಲಸ. ಕಿರಿಯವ ಸೌದಿಯಲ್ಲಿದ್ದಾನೆ. ಅಲ್ಲೇ ಒಬ್ಬಳು ಗುಜರಾತಿಯನ್ನು ಜಾತಿ ನೋಡದೆ ಕಟ್ಟಿಕೊಂಡ. ಕೊನೆಯವಳು ಬೆಂಗಳೂರಲ್ಲಿ ಟೆಕ್ಕಿ. ಅವಳದೂ ಜಾತಿ ಬಿಟ್ಟ ವಿವಾಹ'.

ಅವನು ದಂಗಾದ.

'ಇದೇನು ನಿಮ್ಮ ಮಕ್ಕಳು ಒಂದು ಚಳವಳಿಯನ್ನೇ ಮಾಡಿಬಿಟ್ಟಿದ್ದಾರೆ? ನಿಮಗೆ ಸಾಮಾಜಿಕ ಬಹಿಷ್ಕಾರ ಹಾಕಲು ಯಾರೂ ಪ್ರಯತ್ನಿಸಲಿಲ್ಲವೆ?'

'ನಮ್ಮದು ಹಳ್ಳಿಯಾದರೂ ಒಬ್ಬರ ಖಾಸಗಿ ಜೀವನದಲ್ಲಿ ಇನ್ನೊಬ್ಬರು ಮೂಗು ತೂರಿಸೋದಿಲ್ಲ. ಇನ್ನು ಮರ್ಯಾದೆ ಹತ್ಯೆಯ ಹಂತಕ್ಕೆ ನಮ್ಮೂರು ಮುಟ್ಟಿಲ್ಲ. ಹಿರಿಯವನಿಗೆ ಮೂವರು ಹೆಣ್ಣುಮಕ್ಕಳು. ಎಲ್ಲಾ ಓದುತ್ತಿವೆ. ಹೆಣ್ಣುಮಕ್ಕಳೆಂದು ಅವನು ಒಂದು ಚೂರೂ ಎದೆಗುಂದಿಲ್ಲ. ಇನ್ನು ಸೌದಿಯಲ್ಲಿರುವ ಮಗ, ಬೆಂಗಳೂರಿನ ಮಗಳು ಯಾವ ತಕರಾರೂ ಇಲ್ಲದೆ ಸುಖವಾಗಿದ್ದಾರೆ'.

ಅಜ್ಜಿಯ ಆತ್ಮವಿಶ್ವಾಸದ ನುಡಿಗಳನ್ನು ಅವನು ಮೆಚ್ಚಿಕೊಂಡ.

'ನೀವು ಮತ್ತು ನಿಮ್ಮ ಯಜಮಾನರು ವಿವಾಹಗಳನ್ನು ತಕರಾರಿಲ್ಲದೆ ಒಪ್ಪಿಕೊಂಡಿರಾ?'

ಅಜ್ಜಿ ಮತ್ತೊಮ್ಮೆ ನಕ್ಕಿತು.

'ಮಕ್ಕಳ ಇಷ್ಟಕ್ಕೆ ನಾವು ಅಡ್ಡಿ ಹೇಳಲಿಲ್ಲ. ಇಷ್ಟಕ್ಕೂ ಅವರು ಎಂದೋ ಮೆಜಾರಿಟಿಗೆ ಬಂದೋರು. ಅವರವರ ಬದುಕು ಅವರವರಿಗೆ. ಈಗಾಗಲೇ ಜಗತ್ತು ತುಂಬಾ ಬದಲಾಗಿದೆ. ಮಕ್ಕಳ ಕಾಲಕ್ಕೆ ಎಷ್ಟು ಬದಲಾಗುತ್ತೋ ಏನೋ? ಮಕ್ಕಳ ಮಕ್ಕಳು ಯಾರನ್ನು ಬೇಕಾದರೂ ಮದುವೆಯಾಗಲಿ. ಲಿವಿಂಗ್ ಟುಗೆದರ್‌ಗೆ ಬಲಿಯಾಗಿ ಯಾವನಿಂದಲೋ ಕೊಲೆಯಾಗದಿದ್ದರೆ ಸಾಕು'.

ಅವನು ತಲೆದೂಗಿದ.

'ಅಜ್ಜೀ, ನಿಮ್ಮ ದೃಷ್ಟಿಕೋನವನ್ನು ನಾನು ತುಂಬಾ ಮೆಚ್ಚಿಕೊಂಡೆ. ಮಕ್ಕಳೆಲ್ಲಾ ಅನ್ಯಜಾತಿಯವರನ್ನು ಮದುವೆಯಾದರೂ ನೀವು ಎದೆಗುಂದದೆ ಇರೋದಕ್ಕೆ ಬಲವಾದ ಕಾರಣ ಇರಬೇಕಲ್ಲ'.

ಅಜ್ಜಿ ಒಮ್ಮೆ ಬಲವಾಗಿ ಉಸಿರು ಒಳಗೆಳೆದುಕೊಂಡು ಹೇಳಿತು. 'ಮಗಾ, ನಾನು ತರುಣಿಯಾಗಿದ್ದಾಗ ನನ್ನ ತವರೂರಲ್ಲಿ ಒಂದು ಘಟನೆ ನಡೆದುಹೋಯಿತು. ಹೇಳುತ್ತೇನೆ. ಗಮನವಿಟ್ಟು ಕೇಳಿಸಿಕೋ'.

ಅವನು ಉತ್ಸಾಹದಿಂದ ನೆಟ್ಟಗೆ ಕುಳಿತ. ಅಜ್ಜಿ ಹೇಳಲಾರಂಭಿಸಿತು: ಅಜ್ಜಿಯ ತವರೂರಲ್ಲಿ ತುಂಬಾ ಕ್ರಿಶ್ಚಿಯನ್ ಕುಟುಂಬಗಳಿದ್ದವು. ಊರವರು ಸೌಹಾರ್ದತೆಯಿಂದ ಬದುಕುತ್ತಿದ್ದರು. ಕ್ರಿಶ್ಚಿಯನ್ ಕುಟುಂಬಗಳ ಪ್ರತಿ ಮನೆಯಿಂದ ಒಬ್ಬನಾದರೂ ಗಲ್ಫ್ ದೇಶಗಳಲ್ಲಿ ದುಡಿಯುತ್ತಿದ್ದರು. ಅವರ ದೇಣಿಗೆಯಿಂದ ಬೃಹತ್ತಾದ ಚರ್ಚು, ಎತ್ತರದ ಗಂಟಾಗೋಪುರ ತಲೆ ಎತ್ತಿದವು. ಪ್ರತಿದಿನ ಪೂಜೆ, ಭಾನುವಾರ ಸಾಮೂಹಿಕ ಪ್ರಾರ್ಥನೆ ಆರಂಭವಾದವು. ಚರ್ಚಿನ ಎದುರೊಂದು ಬಾಲ ಏಸುವಿನ ಪ್ರತಿಮೆ ತಲೆ ಎತ್ತಿತು. ಊರವರು ಮತ ನೋಡದೆ ಬಾಲ ಏಸುವಿಗೆ ಕ್ಯಾಂಡಲ್ ಹಚ್ಚಿ ಕೈ ಮುಗಿದು ತಮ್ಮ ನೋವುಗಳನ್ನು ಹೇಳಿಕೊಂಡು ಹಗುರಾಗುತ್ತಿದ್ದರು. ಊರಲ್ಲಿ ಒಂದು ಬಗೆಯ ಉತ್ಸಾಹದ ವಾತಾವರಣ ಉಂಟಾಯಿತು. ಊರಲ್ಲಿ ಚರ್ಚು ಆರಂಭವಾಗುವ ಮೊದಲೇ ಒಂದು ಅಯ್ಯಪ್ಪ ಭಜನಾ ಮಂದಿರ ಇತ್ತು. ಅದು ಡಿಸೆಂಬರಲ್ಲಿ ಅಯ್ಯಪ್ಪ ವಿಳಕ್ಕ್ ಉತ್ಸವ ನಡೆಸುತ್ತಿತ್ತು. ಆಗ ಕ್ರಿಶ್ಚಿಯನ್ನರೂ ಬಂದು ಪ್ರಸಾದ ಸ್ವೀಕರಿಸುತ್ತಿದ್ದರು.

ಅಯ್ಯಪ್ಪ ವಿಳಕ್ಕ್ ನಡೆದ ಮರುದಿನ ವ್ರತಧಾರಿಗಳು ಇರುಮುಡಿ ಕಟ್ಟಿ ಶಬರಿಮಲೆಗೆ ಹೋದವರು ಮಕರ ವಿಳಕ್ಕ್ ಕಳೆದು ವಾಪಸಾಗುತ್ತಿದ್ದರು. ಅಯ್ಯಪ್ಪ ವಿಳಕ್ಕಿನಂದು ಮತ್ತು ವ್ರತಧಾರಿಗಳು ವಾಪಸಾದ ಬಳಿಕ ಊರಲ್ಲಿ ಸಾಮೂಹಿಕ ಅನ್ನ ಸಂತರ್ಪಣೆ. ಅದರಲ್ಲಿ ಕ್ರಿಶ್ಚಿಯನ್ನರೂ ಭಾಗವಹಿಸುತ್ತಿದ್ದರು. ಅಯ್ಯಪ್ಪ ಸ್ವಾಮಿಯಲ್ಲಿಗೆ ಹೋಗಿ ಬಂದವರು ಯಾತ್ರಾ ವಿವರಣೆ ಮಾಡುವಾಗ ಕ್ರಿಶ್ಚಿಯನ್ನರಿಗೂ ತಾವು ಶಬರಿಮಲೆಗೆ ಹೋಗಿ ಬಂದರೇನು ಎಂಬ ಯೋಚನೆ ಮಾಡುತ್ತಿತ್ತು. ಆದರೆ ಫಾದರ್ ಏನು ಹೇಳಬಹುದೋ ಎಂಬ ಭೀತಿಯು ಅವರನ್ನು ಕಾಡುತ್ತಿತ್ತು. ಹಾಗೂ ಆ ವರ್ಷ ಅದು ಸಂಭವಿಸಿಯೇ ಬಿಟ್ಟಿತು.



ನನ್ನ ತವರೂರಲ್ಲಿ ಗಿಲ್ಬರ್ಟ್ ಡಿ'ಸೋಜಾ ಎಂಬ ಒಬ್ಬ ಯುವಕನಿದ್ದ. ಅವನ ತಂದೆ ತಾಯಿ ಎಂದೋ ಸತ್ತು ಹೋಗಿದ್ದರು. ಸೋದರ ಸೋದರಿಯರಿರಲಿಲ್ಲ. ಅವನು ಗಾರೆ ಕೆಲಸ ಮಾಡಿ ಬದುಕು ಕಂಡುಕೊಂಡಿದ್ದ. ತಂದೆ ಮಾಡಿದ ಮನೆ ಮತ್ತು ಇಪ್ಪತ್ತು ತೆಂಗಿನ ಮರಗಳನ್ನು ಬಿಟ್ಟರೆ ಅವನಲ್ಲಿ ಬೇರಾವ ಆಸ್ತಿಯೂ ಇರಲಿಲ್ಲ. ಅವನ ಮಿತ್ರರೆಂದರೆ ಶಬರಿಮಲೆಗೆ ಹೋಗಿ ಬಂದವರು. ಕ್ರಿಶ್ಚಿಯನ್ನರಲ್ಲಿ ಅವನು ಯಾರನ್ನೂ ಹಚ್ಚಿಕೊಳ್ಳಲಿಲ್ಲ. ಆದರೂ ಅವನಿಗೆ ಹೆಣ್ಣು ಕೊಡಲು ಕೆಲವು ಕ್ರಿಶ್ಚಿಯನ್ನರು ಸಿದ್ಧವಾಗಿದ್ದರು. ಅವನು ಮದುವೆಗಿಂತ ಹೆಚ್ಚಾಗಿ ಅಯ್ಯಪ್ಪನ ವ್ರತದ ಬಗ್ಗೆ ಯೋಚನೆ ಮಾಡುತ್ತಿದ್ದ ಅವನಿಗೆ ಶಬರಿಮಲೆಯ ಸುತ್ತಮುತ್ತಣ ಪ್ರಕೃತಿ ವೀಕ್ಷಿಸುವ, ಸಾಧ್ಯವಾದರೆ ಮಕರಜ್ಯೋತಿಯನ್ನು ಕಣ್ಣಾರೆ ಕಾಣುವಾಸೆ. ಆ ಬಾರಿ ಅವನು ವ್ರತಧಾರಿಗಳೊಡನೆ ಹೋಗಿ ಗುರುಸ್ವಾಮಿಯಿಂದ ಮಾಲೆ ಹಾಕಿಸಿಕೊಂಡೇ ಬಿಟ್ಟ. ಊರಲ್ಲಿ ಅದು ದೊಡ್ಡ ಸಂಚಲನವನ್ನುಂಟು ಮಾಡಿತು.

ಊರಿನಲ್ಲಿ ಹರಡಿದ ಸುದ್ದಿ ಇಗರ್ಜಿ ಫಾದರಿಗೆ ಮುಟ್ಟಲು ತಡವಾಗಲಿಲ್ಲ. ಅವರು ಗಿಲ್ಬರ್ಟನನ್ನು ಚರ್ಚಿಗೆ ಕರೆಸಿಕೊಂಡರು. ಕರಿ ಲುಂಗಿ, ಕರಿ ಅಂಗವಸ್ತ್ರ ತೊಟ್ಟು ವಿಭೂತಿ ಬಳಿದುಕೊಂಡಿದ್ದ ಗಿಲ್ಬರ್ಟ್ ಚಪ್ಪಲಿ ಹಾಕದೆ ಹೋಗಿ ರೆಸಿಡೆನ್ಸಿಯಲ್ಲಿದ್ದ ಫಾದರನ್ನು ಕಂಡ.

'ಗಿಲ್ಬರ್ಟ್, ಇದೇನು ನಿನ್ನ ವಿಚಿತ್ರ ವೇಷ? ನೀನು ಶಬರಿಮಲೆಗೆ ಹೋಗ್ತಿದ್ದೀಯಾ?'